ಇ) ಈ ಅನುದಾನದಿಂದ ಮುಳವಾಡ ಏತ ನೀರಾವರಿ ಯೋಜನೆಯ ಮುಖ್ಯ ಕಾಲುವೆಗಳ ಎರಡೂ ಬದಿಗೆ ಗಿಡಗಳನ್ನು ನೆಡಲು ಯೋಜನೆಗಳನ್ನು ಹಾಕಿಕೊಳ್ಳಲಾಗಿಲ್ಲ.

ಈ) ಅನುದಾನ ಲಭ್ಯತೆಯ ಮೇರೆಗೆ ಕಾಲುವೆಗಳ ಎರಡೂ ಬದಿಗೆ ಗಿಡಗಳನ್ನು ನೆಡುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

ಉ) ಅನುದಾನ ಲಭ್ಯತೆಯ ಮೇರೆಗೆ ಕಾಲುವೆಗಳ ಎರಡೂ ಬದಿಗೆ ಗಿಡಗಳನ್ನು ನೆಡುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

654 (1060) ಶ್ರೀ ಶಿವಣ್ಣ ಜಿ. (ರಾಣೆಬೆನ್ನೂರು): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದೊಡ್ಡ ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಆಟೋಗಳು ಹಾಗೂ ಕೆಲವು ಕಾರುಗಳು ಪರಿಸರ ಮಾಲಿನ್ಯಕ್ಕೆ ದಕ್ಕೆಯಾಗುವ ರೀತಿಯಲ್ಲಿ ಹೊಗೆಯನ್ನು ಹೊರಸೂಸುತ್ತಿರುವುದನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ;

ಆ) ಹಾಗಿದ್ದಲ್ಲಿ ಎಷ್ಟರ ಮಟ್ಟಿಗೆ ನಿಯಂತ್ರಣದಲ್ಲಿದೆ?

ಶ್ರೀ ಸಿ. ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ರಾಜ್ಯದಲ್ಲಿ ವಾಹನಗಳಿಂದ ಉಂಟಾಗುವ ಮಾಲಿನ್ಯವನ್ನು ತಡೆಗಟ್ಟಲು ಸರ್ಕಾರವು ಕೆಳಕಂಡ ಕಾರ್ಯಗಳನ್ನು ಹಮ್ಮಿಕೊಂಡಿದೆ.

(i) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ರಾಜ್ಯದಲ್ಲಿ ಸಾರ್ವಜನಿಕರಿಗೆ ತಿಳುವಳಿಕೆ ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

(ii) ರಾಜ್ಯದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ವಾಯುವಿನ ಗುಣಮಟ್ಟವನ್ನು 14 ಸ್ಥಳಗಳಲ್ಲಿ ಮಾಪನ ಮಾಡುತ್ತಿದೆ.

(iii) ವಾಹನಗಳಿಂದ ಹೊರಬರುವ ವಾಯುವಿನ ಮಾಪನವನ್ನು ನಡೆಸಲು ಬೇಕಾದ ಉಪಕರಣಗಳನ್ನು ಅಳವಡಿಸಿದ ಸುಸಜ್ಜಿತವಾದ 8 ಪರಿಸರ ವಾಹಿನಿ ವಾಹನಗಳನ್ನು ಸಾರಿಗೆ ಇಲಾಖೆಗೆ ನೀಡಲಾಗಿದೆ.

(iv) ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಕರ್ನಾಟಕ ಸರ್ಕಾರವು ಬೆಂಗಳೂರು ನಗರದ ವಾಯು ಮಾಲಿನ್ಯವನ್ನು ನಿಯಂತ್ರಿಸಲು 14 ಅಂಶಗಳ ಕಾರ್ಯ ಯೋಜನೆಯನ್ನು ತಯಾರಿಸಿ ಜಾರಿಗೊಳಿಸುತ್ತಿದೆ. ಈ ಕಾರ್ಯ ಯೋಜನೆಯ ಪ್ರಗತಿಯನ್ನು ಸರ್ವೋಚ್ಚ ನ್ಯಾಯಾಲಯದ ಮಾನಿಟರಿಂಗ್ ಸಮಿತಿಯು ಪರಿಶೀಲಿಸುತ್ತಿದೆ. ಇದರಲ್ಲಿ ಬೆಂಗಳೂರು ನಗರದಲ್ಲಿ ಸಂಚರಿಸುವ ಆಟೋರಿಕ್ಷಾಗಳಿಗೆ ಎಲ್.ಪಿ.ಜಿ. ಇಂಧನ ಅಳವಡಿಸುವುದೂ ಸೇರಿದೆ.

(v) ಬೆಂಗಳೂರು ನಗರದಲ್ಲಿ ವಾಯುಮಾಲಿನ್ಯವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಕಾರ್ಯಪಡೆಯನ್ನು (Task Force) ರಚಿಸಲಾಗಿದೆ. ಇದು ಕಾಲಕಾಲಕ್ಕೆ ಸಭೆ ಸೇರಿ ಸೂಕ್ತ ನಿರ್ದೇಶನ ನೀಡುತ್ತಿದೆ.

(vi) ಸಾರಿಗೆ ಇಲಾಖೆಯು ರಾಜ್ಯಾದ್ಯಂತ ವಾಯು ಮಾಲಿನ್ಯ ಉಂಟು ಮಾಡುವ ವಾಹನಗಳ ತಪಾಸಣೆಯನ್ನು ನಡೆಸಿ ನಿಗದಿತ ಮಟ್ಟಕ್ಕಿಂತ ಹೆಚ್ಚು ಮಾಲಿನ್ಯ ಪ್ರಮಾಣಗಳನ್ನು ಹೊರಸೂಸುವ ವಾಹನಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ದಂಡ ವಸೂಲಿ ಮಾಡುತ್ತಿದೆ. ಮಾಲಿನ್ಯ ಪರಿಮಿತಿಯಲ್ಲಿರುವ ಪ್ರಮಾಣ ಪತ್ರವನ್ನು ಹಾಜರುಪಡಿಸುವುದನ್ನು ಕಡ್ಡಾಯಗೊಳಿಸಿದೆ.

(vii) ಬೆಂಗಳೂರು ನಗರದಲ್ಲಿ ಆಟೋರಿಕ್ಷಾಗಳಿಗೆ ಎಲ್.ಪಿ.ಜಿ. ಅಳವಡಿಸಲು ಸರ್ಕಾರ ರ.2000/– ಸಹಾಯಧನ ನೀಡುತ್ತಿದೆ. ಬೆಂಗಳೂರು ನಗರದಲ್ಲಿ 38,097 ಆಟೋರಿಕ್ಷಾಗಳಿಗೆ ಎಲ್.ಪಿ.ಜಿ ಅಳವಡಿಸಲಾಗಿದೆ. (ದ್ವಿ–ಇಂಧನ ಪದ್ಧತಿ ಹೊಂದಿದೆ.) ವರ್ಷಾಂತ್ಯ 2005–06ರಲ್ಲಿ ಸಾರಿಗೆ ಇಲಾಖೆಯು ಪ್ರವರ್ತನ ಸಿಬ್ಬಂದಿಯು 5,69,690 ವಾಹನಗಳ ತಪಾಸಣೆ ನಡೆಸಿ ವಾಯು ಮಾಲಿನ್ಯ ಉಂಟು ಮಾಡುವ 22,585 ವಾಹನಗಳ ಚಾಲಕರ/ಮಾಲೀಕರ ಮೇಲೆ ಪ್ರಕರಣವನ್ನು ದಾಖಲಿಸಿ ದಂಡ ಮೊತ್ತ ರೂ. 66,91,740/– ವಸೂಲಿಸಲಾಗಿದೆ ಹಾಗೂ 263 ಪ್ರಕರಣಗಳನ್ನು ಪ್ರಾಸಿಕ್ಯೂಷನ್‌ಗೆ ಒಳಪಡಿಸಲಾಗಿದೆ.

(viii) ಬೆಂಗಳೂರು ಮಹಾನಗರದಲ್ಲಿ ವರ್ಷಾಂತ್ಯ 2005–2006 ರಲ್ಲಿ ದಟ್ಟ ಹೊಗೆ ಸೂಸುವ 12,528 ವಾಹನಗಳ ತಪಾಸಣೆ ನಡೆಸಿ ಕೇಂದ್ರ ಮೋಟಾರು ವಾಹನಗಳ ಕಾಯ್ದೆ 1988ರ ಕಲಂ 56(4) ಅನ್ವಯ 1,326 ವಾಹನಗಳ ಅರ್ಹತಾ ಪತ್ರವನ್ನು ಅಮಾನತ್ತು ಪಡಿಸಲಾಗಿದೆ ಮತ್ತು ದಂಡ ಮೊತ್ತ ರೂ. 1,37,14,826/– ಗಳನ್ನು ವಸೂಲಿ ಮಾಡಲಾಗಿದೆ.

ಆ) ರಾಜ್ಯದ 8 ನಗರದಲ್ಲಿ ಪರಿವೇಷ್ಟಕ ವಾಯುವಿನ ಗುಣಮಟ್ಟವನ್ನು ಮಾಪನ ಮಾಡಲಾಗುತ್ತಿದೆ. ಬೆಂಗಳೂರಿನಲ್ಲಿ 6 ಕೇಂದ್ರಗಳು, ಹಾಸನ, ಗುಲ್ಬರ್ಗ, ಬೆಳಗಾಂ, ಹುಬ್ಬಳ್ಳಿ, ಧಾರವಾಡ, ಹಾಗೂ ಮಂಗಳೂರಿನಲ್ಲಿ ತಲಾ ಒಂದು ಕೇಂದ್ರಗಳೂ ಮತ್ತು ಮೈಸೂರಿನಲ್ಲಿ 2 ಕೇಂದ್ರಗಳಲ್ಲಿ ಮಾಪನ ಮಾಡಲಾಗುತ್ತಿದೆ. ಇದಲ್ಲದೆ ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಎರಡು ಆನ್‌ಲೈನ್ ಪರಿವೇಷ್ಟಕ ವಾಯುವಿನ ಗುಣಮಟ್ಟದ ಮಾಪನ ಕೇಂದ್ರಗಳನ್ನು ಸ್ಥಾಪಿಸಲು ಕ್ರಮ ತೆಗೆದುಕೊಂಡಿದ್ದು, ಇದರಲ್ಲಿ ಒಂದು ಮಾಪನ ಕೇಂದ್ರವು ಈಗಾಗಲೇ ಕೆಲಸ ಮಾಡುತ್ತಿದೆ.

ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿ ಸ್ಥಾಪಿತಗೊಂಡಿರುವ ಮಾಪನ ಕೇಂದ್ರದ ವಿಶ್ಲೇಷಣಾ ವರದಿಯ ಪ್ರಕಾರ ಕೆಲವೊಂದು ಅಂಶಗಳೆಂದರೆ SPM, RSPM, SO2 and NOx ವಾರ್ಷಿಕ ಸರಾಸರಿ ಮಿತಿಯು ನಿಗದಿತ ಪ್ರಮಾಣಕ್ಕಿಂತ ಹೆಚ್ಚಾಗಿರುವುದು ಕಂಡು ಬಂದಿದೆ. ರಾಜ್ಯದಲ್ಲಿ ಇತರೆ ಮಾಪನ ಕೇಂದ್ರಗಳ ವಿಶ್ಲೇಷಣಾ ವರದಿಯ ಪ್ರಕಾರ ವಾರ್ಷಿಕ ಸರಾಸರಿ ಮಿತಿಗಳ ಅಂಶಗಳು ನಿಗದಿತ ಪ್ರಮಾಣಕ್ಕಿಂತ ಕಡಿಮೆ ಇರುವುದು ಕಂಡುಬಂದಿದೆ.